ಒದಗಿಸುತ್ತಿದ್ದರು. ಆಗಾಗ ಬರುತ್ತಿದ್ದ ಸೈಕಿಯಾಟ್ರಿಸ್ಟ್‌ಗಳು ಬಳಿ ವಿಶೇಷ ಶಿಫಾರಸ್ಸು ಮಾಡಿ ಸೂರ್ಯನಿಗೆ ಬುದ್ಧಿವಾದ ಹೇಳಿಸುತ್ತಿದ್ದರು. ಜನ್ಮದಿನದಂದು ಸಿಹಿ ತಂದು ತಿನ್ನಿಸುತ್ತಿದ್ದರು.

ದಿನಗಳು ಉರುಳತೊಡಗಿದ್ದವು. ಸೂರ್ಯ ಪ್ರೌಢಾವಸ್ಥೆಗೆ ಕಾಲಿರಿಸಿದ್ದ. ಎರಡು ವರ್ಷಗಳು ರಿಮ್ಯಾಂಡ್ ಹೋಮ್, ಉಳಿದ ಆರು ವರ್ಷಗಳ ಕಾಲ ಜೈಲು ಒಟ್ಟು ಎಂಟು ವರ್ಷಗಳ ಶಿಕ್ಷೆ ಅನುಭವಿಸಿ ಹೊರ ಬರುವ ಹೊತ್ತಿಗೆ ಅವನಿಗೆ ಜೈಲಿನಲ್ಲಿ ರೌಡಿ ಗೋಪಿ ಆಪ್ತನಾಗಿಬಿಟ್ಟ. ಒಂದೇ ದಿನ ಅವರಿಬ್ಬರೂ ಬಿಡುಗಡೆಯಾಗಿ ಹೊರ ಬಂದಿದ್ದರು.

ಸೂರ್ಯ ತನಗಾಗಿ ಹೆತ್ತವರು ಕಾಯುತ್ತ ಹೊರ ನಿಂತಿರಬಹುದೆಂಬ ನಿರೀಕ್ಷೆ ಹುಸಿಯಾಗಿತ್ತು. ಅವನಿಗೆ ಎಲ್ಲಿ ಹೋಗಬೇಕೆಂದೇ ತೋಚದಾಗ, ರೌಡಿ ಗೋಪಿ ಸ್ನೇಹ ಹಸ್ತ ಚಾಚಿ ತನ್ನೊಂದಿಗೆ ಕರೆದೊಯ್ದಿದ್ದ. ಹಲಸೂರಿನ ಬಳಿ ಇದ್ದ ದೇವಿ ಗುಡಿಯ ಸಮೀಪವಿದ್ದ ಒಂದು ಓಣಿಯ ಸಣ್ಣ ಮನೆಯಲ್ಲಿ ಅವನು ತನ್ನ ಉಳಿದ ಗೆಳೆಯರೊಂದಿಗೆ ವಾಸವಾಗಿದ್ದ. ಅವರೇನು ಕೆಲಸ ಮಾಡುತ್ತಾರೆಂದು ಸೂರ್ಯನಿಗೆ ಅರಿವಿರಲಿಲ್ಲ. ರಾತ್ರಿ ಹೊತ್ತು ಅವರು ಯಾರೂ ಮನೆಯಲ್ಲಿ ಇರುತ್ತಿರಲಿಲ್ಲ. ಅವರೊಮ್ಮೆ ಕಳ್ಳತನ ಮಾಡಲು ಯತ್ನಿಸಿ ಸಿಕ್ಕಿಬಿದ್ದು ಮತ್ತೆ ತಿಂಗಳ ಮಟ್ಟಿಗೆ ಜೈಲುವಾಸ ಅನುಭವಿಸಲು ಹೋದಾಗ ಸೂರ್ಯ ಒಂಟಿಯಾದ. ದುಡಿಮೆಯ ಹಾದಿಗೆ ಇಳಿಯುವುದು ಅನಿವಾರ್ಯವಾಯಿತು. ಸಮೀಪದಲ್ಲಿದ್ದ ಮಾರುಕಟ್ಟೆಗೆ ಹಾಸನದ ಕಡೆಯಿಂದ ಬರುತ್ತಿದ್ದ ಲಾರಿಗಳಿಂದ ತರಕಾರಿ ಮೂಟೆಗಳನ್ನು ಇಳಿಸುವ ಕೆಲಸ. ಕೈ ತುಂಬಾ ಸಂಬಳ ಬರುತ್ತಿತ್ತು. ಬೆಳಿಗ್ಗೆ ನಾಲ್ಕು ಗಂಟೆಯಿಂದ ಒಂಭತ್ತೂವರೆಗೆಲ್ಲಾ ದುಡಿಮೆ ಮುಗಿಯುತ್ತಿತ್ತು. ಅನಂತರ ರೂಮಿನಲ್ಲಿ ಮಲಗಿ ವಿರಮಿಸುತ್ತಿದ್ದ. ಬೇಸರವಾದಾಗೆಲ್ಲ ಯಾವುದಾದರೂ ದೇವಸ್ಥಾನದಲ್ಲಿ ಹೋಗಿ ಕುಳಿತುಬಿಡುತ್ತಿದ್ದ. ಅಂತರಾತ್ಮದ ಆಳದಲ್ಲೇ ಮುಳ್ಳಾಗಿ ಚುಚ್ಚುತ್ತಿದ್ದ ಪಾಪಪ್ರಜ್ಞೆ, ಹೆತ್ತವರಿಂದ ತಿರಸ್ಕೃತವಾಗಿರುವ ಬಗ್ಗೆ ನೋವು, ಹತಾಶೆ ಅವನನ್ನು ದೇವಸ್ಥಾನಗಳಲ್ಲಿ ಹೊತ್ತು ಕಳೆಯುವಂತೆ ಮಾಡಿತ್ತು. ಬುಧವಾರಗಳಂದು ಲಕ್ಷ್ಮೀ ನರಸಿಂಹ ದೇವಸ್ಥಾನಕ್ಕೆ ಬಂದರೆ ಎಂದಾದರೂ ತಾಯಿಯನ್ನು ಕಾಣಬಹುದೆಂಬ ಅಪೇಕ್ಷೆಯಿಂದ ಆಗಾಗ ಬರುತ್ತಿದ್ದನು. ಅವನ ನಿರೀಕ್ಷೆ ಅಂದು ಫಲಿಸಿತ್ತು. ಆದರೆ ರಾಯರು ಅವನನ್ನು ಗುರುತಿಸಲೇ ನಿರಾಕರಿಸಿದಾಗ ಅವನ ಸಂಕಟ ಇಮ್ಮಡಿಯಾಗಿತ್ತು. ಅಮ್ಮನ ಕಣ್ಣೀರು, ತೊಳಲಾಟ ಕಂಡು ಅವನ ಹೃದಯ ಆರ್ದ್ರಗೊಂಡಿತ್ತು. ಅವರನ್ನು ಕಂಡು ಮಾತನಾಡಿಸಲೇಬೇಕೆಂಬ ಬಯಕೆ, ಅವರನ್ನು ಅರಸಿ ಬೀದಿ ಬೀದಿ ಅಲೆದಿದ್ದ. ಎಂಟು ವರ್ಷಗಳಲ್ಲಿ ಕಾಲನ ಕೈಗೆ ಸಿಕ್ಕಿದ ಊರು ಬಹಳಷ್ಟು ಬದಲಾವಣೆಗಳು ಕಂಡಿತ್ತು. ದೊಡ್ಡ ದೊಡ್ಡ ಕಟ್ಟಡಗಳು ತಲೆಯೆತ್ತಿ ನಿಂತಿದ್ದವು. ಅವನು ಕಲಿತ ಹೈಸ್ಕೂಲು ಅರಸಿ, ಅಲ್ಲಿಂದ ತಾನು ಓಡಾಡುತ್ತಿದ್ದ ರಸ್ತೆ ಗುರುತಿಸಿ ಕಡೆಗೂ ಏನೂ ಬದಲಾವಣೆ ಕಾಣದ ತನ್ನ ಮನೆಯನ್ನು ಕಂಡು ಹಿಡಿಯುವಲ್ಲಿ ಯಶಸ್ವಿಯಾಗಿದ್ದ. ರಾಯರು ತಮ್ಮ ಹಿರಿಯರು ಬಾಳಿ ಬದುಕಿದ ಮನೆಯೆಂಬ ಭಾವುಕತೆಗೆ ಬಿದ್ದು ಅದನ್ನು ಮುಟ್ಟುವ ಗೋಜಿಗೆ ಹೋಗಿರಲಿಲ್ಲ. ಹಳೆಯ ಕಾಲದ ವಿಶಾಲವಾದ ಮನೆಯನ್ನು ಕಾಣುತ್ತಲೇ ಸೂರ್ಯ ಭಾವುಕನಾಗಿ ಗಳಗಳನೇ ಅತ್ತುಬಿಟ್ಟಿದ್ದ. ಸಂಜೆಗತ್ತಲಲ್ಲಿ ಅಪೂರ್ವ ತುಳಸಿಕಟ್ಟೆಯ ಮುಂದೆ ಹಣತೆ ಬೆಳಗಿಸಿ ತಂದಿಟ್ಟದ್ದನ್ನು ಕಂಡಾಗ, 'ಈ ಹುಡುಗಿ ಯಾರು?' ಎಂದು ಸೂರ್ಯನಿಗೆ ಅಚ್ಚರಿಯಾಗಿತ್ತು. ಅನಂತರ ವಿಜಯಮ್ಮನೇ ಧಾವಿಸಿ ಬಂದು ಒತ್ತಾಯದಿಂದ ಮನೆಗೆ ಸೇರಿಸಿಕೊಂಡಿದ್ದರು.

ನೆನಪುಗಳ ಸುರಳಿಯಿಂದ ಬಿಡುಗಡೆಗೊಂಡ ಸೂರ್ಯನ ಮನಸ್ಸು ಕಹಿಯಾಗಿತ್ತು. ತಾನು ಪ್ರಭಾಕರರಾಯರ ಮಗನಲ್ಲ.. ನಾನು ನಿರಂಜನರ ಮಗ! ಇದಕ್ಕಾಗಿಯೇ ಪ್ರಭಾಕರರಾಯರಿಗೆ ತನ್ನನ್ನು ಕಂಡರೆ ಮುಂಚಿನಿಂದಲೂ ಆಗದು. ಅವರಿಗೆ ತನ್ನ ಮೇಲಿರುವ ದ್ವೇಷಕ್ಕೆ ಇದೇ ಕಾರಣ..! ತನಗೆ ಸದಾ ಹೊಡೆಯುತ್ತ, ಬಡಿಯುತ್ತ, ತಾಯಿಂದ ದೂರ ಮಾಡುವ ಎಷ್ಟೊಂದು ಯತ್ನ ನಡೆಸಲಿಲ್ಲ ಈ ಮನುಷ್ಯ! ಚಿಕ್ಕವನಿದ್ದಾಗ ಉಡುಪಿಯ ರೆಸಿಡೆನ್ಶಿಯಲ್ ಶಾಲೆಗೆ ಹಾಕಿ ದೂರವಿರಿಸುವ ಯತ್ನ ನಡೆಸಿದರೆ, ಜೈಲು ಸೇರಿದ ಬಳಿಕ ಒಮ್ಮೆಯೂ ತಾನು ನೋಡಲು ಬಂದಿರಲಿಲ್ಲ.. ತಾಯಿಗೂ ಬರಲು ಬಿಟ್ಟಿರಲಿಲ್ಲ. ಸ್ವಂತ ತಂದೆಯಾಗಿದ್ದರೆ, ರಕ್ತ ಸಂಬಂಧದ ಸೆಳೆತ ಎಳೆಯುತ್ತಿರಲಿಲ್ಲವೇ?

ಪ್ರಭಾಕರ ರಾಯರು ತನ್ನ ಬಗ್ಗೆ ಯಾಕೆ ಇಷ್ಟೊಂದು ಕಠೋರ ನಿಲುವು ತಳೆಯುತ್ತಾರೆ? ತನ್ನ ತಂದೆ ಯಾಕೆ ಹೀಗೆ? ಎಂದು ಚಿಕ್ಕಂದಿನಿಂದಲೂ ಅವನ ಮನವನ್ನು ಕಾಡುತ್ತಿದ್ದ ಪ್ರಶ್ನೆಗೆ ಈಗ ಅವನಿಗೆ ಉತ್ತರ ದೊರಕಿತ್ತು. ತಾನು ಇಂಥ ಸ್ಥಿತಿಗೆ ಬರಲು ಈ ಮನುಷ್ಯನೇ ಕಾರಣ..! ಆತ ಸದಾ ತನ್ನನ್ನು ತಿದ್ದಲು ಬರುತ್ತಿದ್ದ... ಕುಳಿತರೆ ಬುದ್ಧಿವಾದ, ನಿಂತರೆ ಬುದ್ಧಿವಾದ.. ಮನೆಯೊಳಗೆ ಉಸಿರಾಡುವುದೂ ಕಷ್ಟವೆನಿಸಿದಾಗ, ಹೊರಗಿನ ಸ್ವಾತಂತ್ರ್ಯ ಸಹಜವಾಗಿಯೇ ತನ್ನ ಮನಸ್ಸು ಬಯಸುತ್ತಿತ್ತು. ಪ್ರತಿಯೊಂದಕ್ಕೂ ಶಿಸ್ತಿನ ಹೆಸರಿನಿಂದ ಅಂಕುಶ ಹಾಕುತ್ತಿದ್ದ ರಾಯರ ನಿಲುವು ತನಗೆ ಸೈರಣೆಯೇ ಆಗುತ್ತಿರಲಿಲ್ಲ... ಓದಿನಲ್ಲಿ ಹಿಂದಿದ್ದ ತನಗೆ ಅವರ ಅವಹೇಳನ ಇನ್ನಷ್ಟು ಕೆರಳಿಸುತ್ತಿತ್ತು. ಅವರ ಹೊಡೆತ, ಬಡಿತ ರೌದ್ರವತಾರವೇ ತನ್ನನ್ನು ರೊಚ್ಚಿಗೇಳುವಂತೆ ಮಾಡುತ್ತಿತ್ತು... ಕೋಮಲವಾಗಿರಬೇಕಿದ್ದ ತನ್ನ ಮನಸ್ಸನ್ನು ಕಠೋರ ಮಾಡಿದ್ದು ಅಪ್ಪನ ಈ ಸ್ವಭಾವವೇ ಅಲ್ಲವೇ? ಖರ್ಚಿಗೆ ಹಣವೇ ನೀಡದಾಗ ತಾನಾದರೂ ಏನು ಮಾಡಬೇಕಿತ್ತು? ತನಗೆ ಹೊರಗೆ ತಿನ್ನಬೇಕು, ತಿರುಗಬೇಕು.. ಕೊಂಡುಕೊಳ್ಳಬೇಕು.. ತೊಡಬೇಕು ಎಂಬ ಬಯಕೆ ಇರುವುದಿಲ್ಲವೇ? ಗೆಳೆಯರೊಂದಿಗೆ ಸೇರಿ ಅಡ್ಡ ಹಾದಿಗೆ ಇಳಿದಾಗ ಎಲ್ಲಾ ಬಯಕೆಗಳು ಅನಾಯಾಸವಾಗಿ ಈಡೇರತೊಡಗಿದ್ದವು. ಹಣ ಕೈಲಿ ಸರಾಗವಾಗಿ ಓಡತೊಡಗಿತ್ತು. ಅದೊಂದು ಕೆಟ್ಟ ದಿವಸವಾಗಿತ್ತು. ಕರುಣಾಕರ ಎಂಬ ವ್ಯಕ್ತಿ ತನ್ನ ಕೈಲಿಂದ ಆಕಸ್ಮಿಕವಾಗಿ ಹತನಾಗಿದ್ದ. ತನ್ನನ್ನು ಗುರುತಿಸಿದ, ಆತನ ಕೈಗೆ ತಾನು ಸಿಕ್ಕಿಬೀಳುವನೆಂಬ ಆತಂಕದಿಂದ ಹೊಡೆದ ಏಟು ತುಸು ಜೋರಾಗಿಯೇ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ. ತನ್ನ ಬದುಕಲ್ಲಿ ಅಳಿಸಲಾಗದಂಥ ಕಪ್ಪು ಚುಕ್ಕೆಯೊಂದನ್ನು ಅಂಟಿಸಿ ಹೋಗಿದ್ದ.

* * *

## ಸೂರ್ಯನ ಮನದಲ್ಲಿ ತಳಮಳ

ಸೂರ್ಯ ವಿಮನಸ್ಕನಾಗಿದ್ದು ಅಪೂರ್ವಳ ಗಮನಕ್ಕೆ ಬಂದಿತ್ತು. ಮನೆಯ ಬಣ್ಣದ ಕೆಲಸ ಪೂರ್ಣಗೊಂಡಿತ್ತು. ಹೊಸ ಬಣ್ಣಗಳನ್ನೇರಿಸಿ ಕೊಂಡ ಕಂಗೊಳಿಸುತ್ತಿದ್ದ ಗೋಡೆಗಳು, ಮನಸ್ಸಲ್ಲಿ ಹೊಸ ಚೇತನ, ಉಲ್ಲಾಸ ನೀಡಿದ್ದವು. ಅದಕ್ಕೆ ಪೂರಕವಾಗಿ ಮರುದಿನ ಏರ್ಪಡಿಸಲಾಗಿದ್ದ ಸತ್ಯನಾರಾಯಣ ಪೂಜೆಯ ಸಡಗರ ಬೇರೆ ಸೇರಿಕೊಂಡಿತ್ತು. ಸೂರ್ಯ ಕೋಣೆ ಬಿಟ್ಟು ಹೊರಗೆ ಬಂದಿರಲಿಲ್ಲ. ಅವನ ಕಣ್ಮುಂದೆ ಕಪ್ಪು ಬಿಳುಪು ಭಾವಚಿತ್ರ ಸುಳಿದು, ಶಾಂತವಾಗಿದ್ದ ಅವನ ಮನೋಸಾಗರದಲ್ಲಿ ಮತ್ತೆ ಪ್ರಕ್ಷುಬ್ಧ ಅಲೆಗಳು ಅಪ್ಪಳಿಸುವಂತೆ ಮಾಡಿದ್ದವು. ಆರಿದ್ದ ಗಾಯ ಮತ್ತೆ ಕರೆದು ವ್ರಣವಾಗಿಸಿತ್ತು.

'ಸೂರ್ಯ ಯಾಕೆ ಕೋಣೆ ಸೇರ್ಕೊಂಡಿದ್ದಾನೆ? ಯಾವುದೋ ಆಸಕ್ತಿದಾಯಕ ಪುಸ್ತಕ ಸಿಕ್ಕಿರಬೇಕು.. ಅಪೂರ್ವ... ನಾಳೆ ಪೂಜೆಗೆ ಸಾಮಾನು ತರ್ಬೇಕು.. ಅವ್ನಿಗೆ ಬರಲು ಹೇಳ್ತಿಯಾ?' ರಾಯರು ಅಪೂರ್ವಳನ್ನುದ್ದೇಶಿಸಿ ನುಡಿದಾಗ ಅವಳು ಮಾಡುತ್ತಿದ್ದ ಕೆಲಸ ಬಿಟ್ಟೆದ್ದು ಸೂರ್ಯನ ಕೋಣೆಯ ಬಾಗಿಲಿಗೆ ಬಂದು ಇಣುಕಿದಾಗ ಅವನು ಗೋಡೆಗೊರಗಿ ಕುಳಿತು ಗಂಭೀರವಾಗಿ ಯೋಚಿಸುತ್ತಿದ್ದ.

'ನಿಮ್ಮನ್ನು ಅಂಕಲ್ ಕರೀತಿದ್ದಾರೆ.. ಬರ್ಬೇಕಂತೆ.. ಮಾರ್ಕೆಟ್ಟಿಗೆ ಹೋಗಿ ಪೂಜೆಗೆ ಸಾಮಾನು ತರಬೇಕಂತೆ'

'ನಾನು ಎಲ್ಲಿಗೂ ಬರಲ್ಲ.. ತನ್ನ ತಂಟೆಗೆ ಯಾರೂ ಬರ್ಬೇಡಿ' ಎಂದು ಸೂರು ಹಾರಿ ಹೋಗುವಂತೆ ಅರಚಿದ. ಅವನ ವರ್ತನೆಗೆ ಬೆದರಿ ಅವನೆದುರು ನಿಲ್ಲಲಾರದೇ, ಅಪೂರ್ವ ಕಳವಳಗೊಂಡು ವಿಜಯಮ್ಮನನ್ನು ಸಮೀಪಿಸಿದ್ದಳು. ಹೊರಗೆ ಹಜಾರದಲ್ಲಿ ಕುಳಿತಿದ್ದ ರಾಯರಿಗೂ, ವಿಜಯಮ್ಮನಿಗೂ ಅವನ ಕಿರುಚಾಟ ಕೇಳಿಸಿತ್ತು.

'ನಿನ್ನೇ ತನಕ ಖುಷಿ ಖುಷಿಯಿಂದ ಓಡಾಡಿಕೊಂಡಿದ್ದ.. ಮನೆಗೆ ಬಣ್ಣ ಹಚ್ಚಿಸೋ ಕೆಲಸ ತಾನೇ ನಿಂತು ಮಾಡಿಸಿದ್ದ.. ಈಗೇನಾಯ್ತು ಇವನಿಗೆ..?' ಮಗನ ಮನದಲ್ಲಿದ್ದ ಆಂದೋಲನದ ಅರಿವಿರದ ವಿಜಯಮ್ಮ ಪ್ರಶ್ನಾರ್ಥಕವಾಗಿ ರಾಯರ ಮುಖದತ್ತ ನೋಡಿದರೆ, ಅವರ ಮುಖದಲ್ಲೂ ಅದೇ ಭಾವವಿತ್ತು.

**(ಸಶೇಷ)**